## ಗೆಳೆಯ ಸಂತೋಷ್ ಕಲಿಸಿದ್ದ ಹೆಲಿಕಾಪ್ಟರ್ ಶಾಟ್

ಮಹೇಂದ್ರಸಿಂಗ್ ದೋನಿಗೆ ಹೆಲಿಕಾಪ್ಟರ್ ಶಾಟ್ ಪ್ರಯೋಗಿಸುವುದನ್ನು ಅವರ ಬಾಲ್ಯದ ಗೆಳೆಯ ಸಂತೋಷ್ ಲಾಲ್ ಹೇಳಿಕೊಟ್ಟಿದ್ದರು.

ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯ ಆಡುವ ಸಂದರ್ಭದಲ್ಲಿ ಸಂತೋಷ್ ಆಡಿದ್ದ ಹೊಡೆತವನ್ನು ನೋಡಿದ್ದ ದೋನಿ ಮರುಳಾಗಿದ್ದರು. ಅವರಿಗೆ ದುಂಬಾಲು ಬಿದ್ದು ಕಲಿತುಕೊಂಡಿದ್ದರು. ನಂತರ ಕಷ್ಟಪಟ್ಟು ಪರಿಣತಿ ಸಾಧಿಸಿದ್ದರು. ಆದರೆ, ಸಂತೋಷ್ ಲಾಲ್ ಮೂರು ವರ್ಷಗಳ ಹಿಂದೆ ಅನಾರೋಗ್ಯದಿಂದಾಗಿ ನಿಧನರಾದರು.

ಬಂದಿದ್ದು ಟೀಕಾಕಾರರು ಹುಬ್ಬೇರಿಸಲು ಕಾರಣವಾಗಿತ್ತು. ಆದರೆ, ದೋನಿ ಗೆದ್ದಿದ್ದರು. ಅಜೇಯ 91 ರನ್ ಹೊಡೆದ ಅವರು 28 ವರ್ಷಗಳ ನಂತರ ವಿಶ್ವಕಪ್ ಜಯದ ಕನಸು ನನಸು ಮಾಡಿದ್ದರು.

### ಅಜೇಯ 183ರ ನೆನಪು

ವಿಶ್ವಕಪ್ ಟೂರ್ನಿಯ ಸಂದರ್ಭದಲ್ಲಿ ದೋನಿ ಅನುಭವಿ ನಾಯಕ ಮತ್ತು ಬ್ಯಾಟ್ಸ್‌ಮನ್ ಆಗಿದ್ದರು. ಆದರೆ, ಭಾರತ ತಂಡಕ್ಕೆ ಕಾಲಿಟ್ಟ ಹೊಸತರಲ್ಲಿಯೂ ಅವರಲ್ಲಿ ಆ ಗುಣವಿತ್ತು ಎಂಬುದನ್ನು ಅಲ್ಲಗಳೆಯಲಾಗದು. ಅವರು ಪಾಕಿಸ್ತಾನ ವಿರುದ್ಧ ದಾಖಲಿಸಿದ್ದ ಚೊಚ್ಚಲ ಶತಕ (148 ರನ್) ಅದಕ್ಕೆ ಸಾಕ್ಷಿ. ಆದರೆ, ಅದಕ್ಕಿಂತಲೂ ಶ್ರೇಷ್ಠ ಇನಿಂಗ್ಸ್ ಮೂಡಿಬಂದಿದ್ದು 2005ರಲ್ಲಿ ಜೈಪುರದಲ್ಲಿ. ಭಾರತ ಅಂದು ಮೊದಲು ಬ್ಯಾಟಿಂಗ್ ಮಾಡುತಿತ್ತು. ಸಚಿನ್ ತೆಂಡೂಲ್ಕರ್ ಬಹಳ ಬೇಗನೆ ಔಟಾಗಿದ್ದರು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಉದ್ದಕೇಶರಾಶಿಯ ದೋನಿ ಶ್ರೀಲಂಕಾ ಬೌಲರ್‌ಗಳನ್ನು ದೂಳಿಪಟ ಮಾಡಿಬಿಟ್ಟರು. 145 ಎಸೆತಗಳಲ್ಲಿ 183 ರನ್ ಗಳಿಸಿ ಅಜೇಯರಾಗುಳಿದರು. ಭಾರತ 50 ಓವರ್‌ಗಳಲ್ಲಿ 299 ರನ್ ಪೇರಿಸಿತ್ತು. ಇನ್ನೊಂದು ಎರಡು–ಮೂರು ಓವರ್‌ಗಳು ಸಿಕ್ಕಿದ್ದರೆ ದೋನಿ ದ್ವಿಶತಕವನ್ನು ದಾಖಲಿಸುವ ಸಾಧ್ಯತೆ ಇತ್ತು.

### ಗ್ವಾಲಿಯರ್‌ನ ಅಂಗಳದ ಆಟ

ದೋನಿ ಸ್ವತಃ ದ್ವಿಶತಕದ ಸಾಧನೆ ಮಾಡಲಿಲ್ಲ ನಿಜ. ಆದರೆ, 2010ರಲ್ಲಿ ಗ್ವಾಲಿಯರ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡದ ಎದುರು ಭಾರತದ ಸಚಿನ್ ತೆಂಡೂಲ್ಕರ್ ಅಜೇಯ ದ್ವಿಶತಕದ ವಿಶ್ವದಾಖಲೆ ನಿರ್ಮಿಸಲು ದೋನಿಯ ಅಲ್ಪಕಾಣಿಕೆಯೂ ಇತ್ತು ಎನ್ನುವುದನ್ನು ಅಲ್ಲಗಳೆಯಲಾಗದು.

ಸಚಿನ್ 168 ರನ್ ಗಳಿಸಿ ಆಡುತ್ತಿದ್ದ ಸಂದರ್ಭದಲ್ಲಿ ದೋನಿ ಕ್ರೀಸ್‌ಗೆ ಬಂದಿದ್ದರು. ತಂಡವು 41 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 300 ರನ್ ಗಳಿಸಿತ್ತು. ಸಚಿನ್ ದ್ವಿಶತಕವನ್ನೂ ಪೂರೈಸಬೇಕು ಮತ್ತು ತಂಡವು ದೊಡ್ಡ ಮೊತ್ತ ಪೇರಿಸಬೇಕು ಎಂಬ ಯೋಜನೆಯೊಂದಿಗೆ ಕ್ರೀಸ್‌ಗೆ ಕಾಲಿಟ್ಟಿದ್ದ ದೋನಿ ಸಫಲರಾದರು. ಅದಾಗಲೇ ಸಾಕಷ್ಟು ದಣಿದಿದ್ದ ಸಚಿನ್‌ಗೆ ಹೆಚ್ಚು ಸ್ಟ್ರೈಕ್ ನೀಡದೇ ತಾವೇ ಆಡುತ್ತಿದ್ದಾಗ ಕೆಲವರಿಗೆ ಅಚ್ಚರಿ ಎನ್ನಿಸಿರಬಹುದು. ಆದರೆ, ಸಚಿನ್‌ಗೆ ನಿಯಮಿತ ಅಂತರದಲ್ಲಿ ಬ್ಯಾಟಿಂಗ್ ರೊಟೇಟ್ ಮಾಡಿದ ಅವರು ತಂಡದ ಮೊತ್ತವನ್ನು 400 ಗಡಿ ದಾಟಿಸಿದರು. ಸಚಿನ್ ವಿಶ್ವದಾಖಲೆ ಬರೆದರು. ದೋನಿ ಅಜೇಯ 68 ರನ್ ಗಳಿಸಿದರು. ಒಂದೊಮ್ಮೆ ತಂಡವು ಕೇವಲ 325 ರಿಂದ 340 ರನ್ ಗಳಿಸಿದ್ದರೆ ಅಂದು ದಕ್ಷಿಣ ಆಫ್ರಿಕಾ ಗೆಲ್ಲುವ ಅವಕಾಶ ಹೆಚ್ಚಿತ್ತು. ದೋನಿ ಯೋಚನೆಯ ಫಲವಾಗಿ 400ರ ಬೃಹತ್ ಮೊತ್ತವು ಗೆಲುವಿಗೆ ಕಾರಣವಾಯಿತು.

### ನಾಲ್ಕನೇ ಕ್ರಮಾಂಕದಲ್ಲಿಯೂ ಸೈ

ತಂಡದ ಅಗತ್ಯಕ್ಕೆ ಅನುಗುಣವಾಗಿ ಯಾವುದೇ ಕ್ರಮಾಂಕದಲ್ಲಿಯೂ ಬ್ಯಾಟ್ ಬೀಸುವ ಸಾಮರ್ಥ್ಯ ದೋನಿಗೆ ಇದೆ. ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ 3021 ರನ್ ಗಳಿಸಿರುವ ವಿಶ್ವದಾಖಲೆ ಅವರದ್ದು. ಆದರೆ, ಕಳೆದ ಅಕ್ಟೋಬರ್‌ನಲ್ಲಿ ಮೊಹಾಲಿಯಲ್ಲಿ ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದು ಅಚ್ಚರಿ ಮೂಡಿಸಿದ್ದರು. ಸುರೇಶ್ ರೈನಾ ಅನುಪಸ್ಥಿತಿ ಮತ್ತು ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯವನ್ನು ಸರಿದೂಗಿಸಿದ್ದರು. ವಿರಾಟ್ ಕೊಹ್ಲಿ ಜೊತೆಗೂಡಿ 151 ರನ್ ಸೇರಿಸಿದರು. 80 ರನ್ ಹೊಡೆದ ದೋನಿ ಶತಕದ ಹಾದಿಯಲ್ಲಿ ಎಡವಿದರು. ಆದರೆ, ತಂಡ ಗೆದ್ದಿತ್ತು. ದೋನಿ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಒಂಬತ್ತು ಸಾವಿರ ರನ್‌ಗಳ ಗಡಿ ದಾಟಿದರು. ಅವರು ಈ ಸಾಧನೆ ಮಾಡಿದ ಭಾರತದ 5ನೇ ಮತ್ತು ವಿಶ್ವದ 17ನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅಲ್ಲದೇ ಒಂಬತ್ತು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ವಿಶ್ವದ ಮೂರನೇ ವಿಕೆಟ್‌ಕೀಪರ್–ಬ್ಯಾಟ್ಸ್‌ಮನ್ ಕೂಡ ಆದರು.

2004ರಲ್ಲಿ ಅವರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಸಂದರ್ಭದಿಂದ ಇಲ್ಲಿಯವರೆಗೂ ತಮ್ಮ ಆಟದ ಲಯ ಉಳಿಸಿಕೊಂಡಿದ್ದಾರೆ. ಇದೀಗ ತಂಡದ ನಾಯಕತ್ವದ ಹೊರೆ ಕಳಚಿಕೊಂಡು ನಿರಾಳರಾಗಿರುವ ಅವರು ತಮ್ಮ ಬ್ಯಾಟಿಂಗ್ ಮತ್ತು ವಿಕೆಟ್‌ಕೀಪಿಂಗ್‌ನಲ್ಲಿ ಮತ್ತಷ್ಟು ಬೆಳಗುವ ನಿರೀಕ್ಷೆ ಮೂಡಿಸಿದ್ದಾರೆ. ಹೆಲಿಕಾಪ್ಟರ್ ಹಾರಾಟ ಇನ್ನೂ ಬಾಕಿ ಇದೆ.

**ಅತಿ ಹೆಚ್ಚು ಸ್ಟಂಪಿಂಗ್ ಮಾಡಿದ ವಿಕೆಟ್ ಕೀಪರ್ (ಮೂರು ಮಾದರಿ ಸೇರಿ)**

| ಆಟಗಾರ | ದೇಶ | ಪಂದ್ಯ | ಸ್ಟಂಪ್ | ಕ್ಯಾಚ್ | ಅವಧಿ |
|---|---|---|---|---|---|
| ದೋನಿ | ಭಾರತ | 444 | 151 | 561 | 2004–16 |
| ಸಂಗಕ್ಕಾರ | ಶ್ರೀಲಂಕಾ | 464 | 139 | 671 | 2000–15 |
| ಕಲುವಿತರಣ | ಶ್ರೀಲಂಕಾ | 234 | 101 | 224 | 1992–2004 |

**ಒಂಬತ್ತು ಸಾವಿರ ರನ್ ಸರದಾರರು**

| ಆಟಗಾರ | ರನ್ |
|---|---|
| ಸಚಿನ್ ತೆಂಡೂಲ್ಕರ್ | 18426 |
| ಸೌರವ್ ಗಂಗೂಲಿ | 11363 |
| ರಾಹುಲ್ ದ್ರಾವಿಡ್ | 10889 |
| ಮೊಹಮ್ಮದ್ ಅಜರುದ್ದೀನ್ | 9378 |
| ಮಹೇಂದ್ರಸಿಂಗ್ ದೋನಿ | 9110 |

**ಒಂಬತ್ತು ಸಹಸ್ರ ರನ್ ಗಳಿಸಿದ ವಿಕೆಟ್‌ಕೀಪರ್-ಬ್ಯಾಟ್ಸ್‌ಮನ್**

| ಆಟಗಾರ | ದೇಶ | ರನ್ |
|---|---|---|
| ಸಂಗಕ್ಕಾರ | ಶ್ರೀಲಂಕಾ | 14234 |
| ಗಿಲ್‌ಕ್ರಿಸ್ಟ್ | ಆಸ್ಟ್ರೇಲಿಯಾ | 9619 |
| ದೋನಿ | ಭಾರತ | 9110 |

